ಬೆದ್ಕತ ಕಟ್ಟಿ ಏತ ನೀರಾವರಿ ಕಾಮಗಾರಿ.

864. ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಕುಂದಾಪುರ ತಾಲ್ಲೂಕಿನ ಬೆದ್ಕತಕಟುಮಟ್ಟಿ ಏತ ನೀರಾವರಿ ಕಾಮಗಾರಿಗೆ ಮಂಜೂರಾತಿ ದೊರೆತಿದ್ದರೂ ಈ ತನಕ ಟೆಂಡರು ಕರೆಯದಿರಲು ಕಾರಣವೇನು;

ಆ) ಎಂದು ಈ ಟೆಂಡರನ್ನು ಕರೆಯಲಾಗುವುದು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) –

ಅ) ಕುಂದಾಪುರ ತಾಲ್ಲೂಕಿನಲ್ಲಿ ಬೆದ್ಕತಕಟ್ಟಿ ಏತ ನೀರಾವರಿ ಕಾಮಗಾರಿ ಯಾವುದೂ ಇಲ್ಲ. ಆದರೆ ಬಿಡ್ಕಲ್‌ಕಟ್ಟಿ ಏತ ನೀರಾವರಿ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಈಗಿನ ನಬಾರ್ಡ್ ನಿಯಮಾವಳಿಗಳ ಪ್ರಕಾರ ಸದರಿ ಯೋಜನೆಯ ಅಂದಾಜನ್ನು ಮಾರ್ಪಡಿಸಲಾಗುತ್ತಿದೆ. ಯೋಜನೆ ಅಂದಾಜು ತಯಾರಾದ ನಂತರ ನಬಾರ್ಡ್‌ಗೆ ಆರ್ಥಿಕ ನೆರವಿಗಾಗಿ ಸಲ್ಲಿಸಲಾಗುವುದು. ಆರ್ಥಿಕ ನೆರವು ದೊರೆತ ನಂತರ ಟೆಂಡರ್ ಕರೆಯಲಾಗುವುದು.

ಆ) ನಬಾರ್ಡ್‌ನಿಂದ ಆರ್ಥಿಕ ನೆರವು ದೊರೆತ ನಂತರ ಟೆಂಡರ್ ಕರೆಯಲಾಗುವುದು.

ಕುಂದಗೋಳ ತಾಲ್ಲೂಕ್ ಪೂರ್ವಭಾಗದಲ್ಲಿರುವ ಹಳ್ಳಿಗಳಲ್ಲಿ ಕುಡಿಯುವ ನೀರಿನ ತೊಂದರೆ

105. ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ್ (ಕುಂದಗೋಳ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಕುಂದಗೋಳ ತಾಲ್ಲೂಕು ಪೂರ್ವ ಭಾಗದಲ್ಲಿ ಇರುವ ಹಳ್ಳಿಗಳಾದ ಯರಿಗುಪ್ಪ ಯರಿನಾರಾಯಣಪುರ, ಹಿರೇನರ್ತಿ, ಯರಿಭೂದಿಹಾಳ ಇನ್ನೂ ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?

ಇ) ಶಾಶ್ವತವಾಗಿ ಕುಡಿಯುವ ನೀರು ಸಿಗುವ ವ್ಯವಸ್ಥೆ ಯಾವಾಗ ಮಾಡಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) –

ಅ) ಬಂದಿದೆ

ಆ) ಕ್ರಮ ತೆಗೆದುಕೊಂಡ ವಿವರಗಳು ಈ ಕೆಳಕಂಡಂತಿವೆ :

1. ನಳ ನೀರು ಸರಬರಾಜು ಮಾಡಲು 1991–92ನೇ ಸಾಲಿನ ಅನುಬಂಧ 'ಇ' ಯಲ್ಲಿ ಈ ಗ್ರಾಮಗಳನ್ನು ಒಪ್ಪಲಾಗಿದ್ದು ಸೂಕ್ತ ಅನುದಾನವನ್ನು ನೀಡಲಾಗಿದೆ.

(ರೂಪಾಯಿ ಲಕ್ಷ ಗಳಲ್ಲಿ)

ಕ್ರಮ ಸಂಖ್ಯೆ	ಹೆಸರು	ಅಂದಾಜು ಮೊತ್ತ	ಅನುದಾನ
1.	ಯರಿನಾರಾಯಣಪುರ ಮತ್ತು ಇತರ ಗ್ರಾಮಗಳು	7.63	2.54
2.	ಭರದ್ವಾಜ	3.07	1.07
3.	ಕಡಪಟ್ಟಿ ಮತ್ತು ಇತರ ಗ್ರಾಮಗಳು	23.49	7.83

2. ಯರಿಭೂದಿಪಾಳ ಮತ್ತು ಇತರ ಗ್ರಾಮಗಳ ಸಂಯುಕ್ತ ನೀರು ಸರಬರಾಜು ಯೋಜನೆ :

ಈ ಯೋಜನೆಯ ಜಲಮೂಲವಾದ ಕೊಳವೆ ಬಾವಿಯು ಕುಸಿದಿದ್ದ ಕಾರಣ ಹೊಸ ಜಲ ಮೂಲವನ್ನು ನಿರ್ಧರಿಸಲು ಕ್ರಮ ಕೈಗೊಳ್ಳಲಾಗಿದೆ.

3. ಹಿರೇನರ್ತಿಗ್ರಾಮದ ನಳ ನೀರು ಸರಬರಾಜು ಯೋಜನೆ :

ಈ ಯೋಜನೆಯ ಜನಮೂಲವು ನೀರಿನ ಪ್ರಮಾಣ ಇಳುವರಿಯಾಗಿರುವುದರಿಂದ ಹೊಸ ಜಲಮೂಲವನ್ನು ನಿರ್ಧರಿಸಲು ಕ್ರಮಕೈಗೊಳ್ಳಲಾಗಿದೆ.

ಇ) ಕುಂದಗೋಳ ತಾಲ್ಲೂಕಿನಲ್ಲಿ ಬರುವ ಗ್ರಾಮಗಳು ಅತೀ ಹೆಚ್ಚಿನ ಬ್ರಾಕಿಷ್ ಜೋನ್ ನಲ್ಲಿರುವುದರಿಂದ ಶುದ್ಧವಾದ ನೀರಿನ ಜಲಮೂಲವನ್ನು ನಿಗಧಿಪಡಿಸಿಕೊಡಲು ಕೇಂದ್ರ ಅಂತರ್ಜಲ ಸಂಸ್ಥೆಗೆ ಕೋರಲಾಗಿದೆ. ಶುದ್ಧವಾದ ನೀರಿನ ಜಲಮೂಲವನ್ನು ಸ್ಥಾಪಿಸಿದ ನಂತರ ವಿವಿಧ ಯೋಜನೆಯ ಅಡಿಯಲ್ಲಿ ಶಾಶ್ವತ ನೀರು ಸರಬರಾಜು ಮಾಡಲು ಕ್ರಮಕೈಗೊಳ್ಳಲಾಗುವುದು. ಮತ್ತು ಕುಂದಗೋಳ ತಾಲ್ಲೂಕಿನ ನೆಲಗುಡ್ಡ, ಕುಂಕೂರು, ಜಗಳೂರು, ಹೊಸಕಟ್ಟಿ, ಕಲ್ಲಲ್ಲಿ, ಯರಿಗುಪ್ಪ, ಯರಿನಾರಾಯಣಪುರ ಮುಂತಾದ ಗ್ರಾಮಗಳಿಗೆ ಶಾಶ್ವತ ನೀರು ಸರಬರಾಜು ಯೋಜನೆಗೆ ನೆದರ್‌ಲ್ಯಾಂಡ್ ಸಹಾಯದಿಂದ ತೆಗೆದುಕೊಳ್ಳುವ ಯೋಜನೆಗಳಲ್ಲಿ ಪ್ರಸ್ತಾಪಿಸಲು ಪ್ರಯತ್ನಿಸಲಾಗುತ್ತಿದೆ. ಈ ಗ್ರಾಮಗಳಿಗೆ ಮಲಪ್ರಭಾ ಬಲದಂಡೆ ಕಾಲುವೆಯಿಂದ ನೀರು ಪಡೆದು ಸಂಯುಕ್ತ ನೀರು ಸರಬರಾಜು ಯೋಜನೆಯ ಬಗ್ಗೆ ಸಹಾ ಪರಿಶೀಲಿಸಲಾಗುತ್ತಿದೆ.

ಸೂಳೆಕೋಪೆ ಸೇತುವೆ ಕಟ್ಟುವ ವಿಚಾರ

76. ಶ್ರೀ ಕೆ.ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಪಿರಿಯಾಪಟ್ಟಣ ತಾಲ್ಲೂಕಿನ ಸೂಳೆಕೊಪೆ ಸೇತುವೆಯ ಅಂದಾಜು ವೆಚ್ಚವೆಷ್ಟು ; ಹಾಗೂ ಇದುವರೆವಿಗೂ ಎಷ್ಟು ಹಣ ಖರ್ಚು ಮಾಡಲಾಗಿದೆ ;

ಆ) ಅದರ ನಿರ್ಮಾಣ ಕಾರ್ಯವು ಯಾವ ಹಂತದಲ್ಲಿದೆ? ಹಾಗೂ ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) –

ಅ) ಈ ಕಾಮಗಾರಿಯ ಅಂದಾಜು ವೆಚ್ಚ 42.00 ಲಕ್ಷ ರೂ.ಗಳಾಗಿದ್ದು ಇದುವರೆವಿಗೂ 20.57 ಲಕ್ಷ ರೂ. ಗಳು ಖರ್ಚಾಗಿರುತ್ತದೆ.

ಆ) ಈ ಸೇತುವೆಯ ಅಬಟ್‌ಮೆಂಟ್ ಕೆಲಸ 2 ಸ್ಪಾನ್‌ಗಳಿಗೆ ಡೆಕ್‌ಸ್ಲಾಬ್ ಹಾಕಿದ್ದು 5 ಕಂಬಗಳನ್ನು ಕ್ಯಾಸ್ಟ್ ಮಾಡಲಾಗಿದೆ.

ಈಗ ಉಳಿಕೆ ಕಾಮಗಾರಿಯನ್ನು ಪುನಃ ಪ್ರಾರಂಭಿಸಲು ಕರ್ನಾಟಕ ರಾಜ್ಯ ನಿರ್ಮಾಣ ನಿಗಮದವರಿಗೆ ವಹಿಸಿಕೊಡಲು ಪರಿಶೀಲಿಸಲಾಗುತ್ತಿದೆ, ಮತ್ತು ಇದನ್ನು ನಿಗಮದವರಿಗೆ ವಹಿಸಿಕೊಟ್ಟು ಆದಷ್ಟು ಬೇಗ ಈ ಕಾಮಗಾರಿಯನ್ನು ಮುಗಿಸಲು ಕ್ರಮ ಕೈಗೊಳ್ಳಲಾಗುವುದು.